ದಿಃ **24-01-2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **No.1, 3, 4** ರವರ ಪರ ಶ್ರೀ. **DSG** ವಕೀಲರವರಿಂದಃ

**02.** ಪದವಿ ಅಪೂರ್ಣ ಆಗಿದ್ದ ವರ್ಷದಲ್ಲಿ ನನ್ನ ಮದುವೆ ಆಗಿರುತ್ತದೆ ಎಂದರೆ ನನ್ನ ಮದುವೆ ಆಗಿದ್ದಾಗ ನಾನು ಮನೆಯಲ್ಲಿಯೇ ಇದ್ದೇನು. ನನ್ನ ಮದುವೆಯನ್ನು ನನ್ನ ತಂದೆ ತಾಯಿ ಮಾಡಿಕೊಟ್ಟಿರುತ್ತಾರಾ ಎಂದರೆ ನಾನೇ ಮಾಡಿಕೊಂಡಿರುತ್ತೇನೆ. ಈ ದಾವಾ ಆಸ್ತೀಯ ಸರ್ವೇ ನಂಬರ **529/**ಎ, **4.79** ಎಕರೆ, ಮತ್ತು ಸರ್ವೇ ನಂಬರ **475** ಬಿ**/1** ಎಫ್, **0.07** ಎಕರೆ ಮತ್ತು ತಾಯಿಯ ಆಸ್ತೀಯಾದ ಸರ್ವೇ ನಂಬರ **164** ಎ**/1, 1.74** ಎಕರೆ ಮತ್ತು **163** ಎ**/2, 1.30** ಎಕರೆ ಇರುತ್ತದೆ. ನನ್ನ ದೊಡ್ಡಪ್ಪ, ತಂದೆ ಮತ್ತು ಚಿಕ್ಕಪ್ಪ **2004** ರಲ್ಲಿ ಬೇರೆಯಾಗಿರುತ್ತಾರೆ. ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ **2004** ರಲ್ಲಿ ಇವರೆಲ್ಲ ಬೇರೆ ಆಗಿರುವ ವಿಷಯವನ್ನು ಬರೆಸಿರುವುದಿಲ್ಲ. ನನ್ನ ಮುಖ್ಯವಿಚಾರಣೆಯಲ್ಲಿ ದಿ.**31-12-2012** ರಂದು ಪಾಲುವಿಭಾಗ ಆಗಿರುತ್ತದೆ ಎಂದು ಬರೆಸಿರುವುದು ಸರಿಯೋ ಅಥವಾ ಈಗ ಹೇಳಿದ ಹಾಗೆ **2004** ರಲ್ಲಿ ಬೇರೆ ಆಗಿರುತ್ತಾರೆ ಎಂದು ಹೇಳಿರುವುದು ಸರಿಯೋ ಎಂದರೆ **2004** ರಲ್ಲಿ ಹಿರಿಯರೆಲ್ಲ ಕುಳಿತುಕೊಂಡು ಆಸ್ತೀಗಳನ್ನು ಹಂಚಿಕೆ ಮಾಡಿಕೊಂಡಿರುತ್ತಾರೆ ಮತ್ತು **2012** ರಲ್ಲಿ ನನ್ನ ಅಜ್ಜನ ಆಸ್ತೀ ನನ್ನ ತಂದೆಗೆ ಖಾತಾ ಬದಲಾವಣೆ ಆಗಿರುತ್ತದೆ. ಇದಕ್ಕೆ ಸಂಬಂದಪಟ್ಟಹಾಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**03.** ದಿ.**31-12-2012** ರಂದು ನನ್ನ ದೊಡ್ಡಪ್ಪ, ತಂದೆ ಮತ್ತು ಚಿಕ್ಕಪ್ಪ ಎಲ್ಲರೂ ಕೂಡು ಕುಟುಂಬದಲ್ಲಿಯೇ ಇದ್ದರು ಎಂದರೆ ಸರಿಯಲ್ಲ. ನನ್ನ ತಂದೆಯ ಸಹೋದರರು **6** ಜನ ಮತ್ತು ಸಹೋದರಿ ಒಬ್ಬರು. **2004** ರಲ್ಲಿ ಅನುಕ್ರಮ **3** ಮತ್ತು **4** ನೇ ಆಸ್ತೀಗಳನ್ನು ತಾಯಿಯ ಹೆಸರಿನಲ್ಲಿ ಖರೀದಿ ಮಾಡಲು ಅವರಿಗೆ

ಆದಾಯ ಇರುವುದಿಲ್ಲ ಎಂದರೆ ಆದಾಯ ಇರುತ್ತದೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಅವರ ಸಹೋದರರು ಕೂಡು ಕುಟುಂಬದಲ್ಲಿ ಇದಿದ್ದರಿಂದ ಅವರಿಗೆ ಅದಾಯವೆಲ್ಲ ಖರ್ಚು ಆಗುತ್ತಿದ್ದು ಅವರಿಗೆ ಏನೂ ಉಳಿಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಅನುಕ್ರಮ **3** ಮತ್ತು **4** ಆಸ್ತೀಗಳು ನನ್ನ ತಾಯಿ ಸ್ವಂತ ದುಡಿಮೆಯ ಆಸ್ತೀ ಎಂದರೆ ನನ್ನ ತಾಯಿ ಯಾವತ್ತೂ ಹೊರಗಡೆ ಹೋಗಿರುವುದಿಲ್ಲ ಹಾಗೂ ದುಡಿದಿರುವುದಿಲ್ಲ. ನನ್ನ ತಾಯಿ ಹಾಲು ಮಾರಿ, ತರಕಾರಿ ಮಾರಿ ಮತ್ತು ಅವರ ತವರು ಮನೆಯವರು ನೀಡಿದ ದುಡ್ಡಿನಿಂದ ಅನುಕ್ರಮ **3** ಮತ್ತು **4** ಆಸ್ತೀಗಳು ಖರೀದಿ ಮಾಡಿರುತ್ತಾರೆ ಎಂದರೆ ನನ್ನ ತಾಯಿ ಆಕಳನ್ನು ಮೇಯಿಸಿ ಹಾಲು ಮಾರಿರುವುದು **2016** ರಿಂದ ಇತ್ತಿಚೇಗೆ ಆದರೆ ಆಸ್ತೀ ಖರೀದಿ ಆಗಿರುವುದು **2004** ರಲ್ಲಿ. ಅನುಕ್ರಮ **3** ಮತ್ತು **4** ಆಸ್ತೀಗಳು ನಾವು **2012** ರಲ್ಲಿ ಬೇರೆ ಆಗಿದ್ದರೆ ನನ್ನ ತಾಯಿಯ ಹೆಸರಿನಲ್ಲಿ **2004** ರಲ್ಲಿ ನೊಂದಣಿ ಮಾಡಿಸಿ ಕೊಡತಿರಲಿಲ್ಲ ಎಂದರೆ **2004** ಮತ್ತು **2005** ರಿಂದ ನನ್ನ ತಂದೆ ಮತ್ತು ಅವರ ಸೋದರರರು ಅವರ ಆಸ್ತೀಗಳನ್ನು ಬಾಗಮಾಡಿಕೊಂಡು ಅವರವರೇ ಉಳುಮೆ ಮಾಡುತ್ತಿದ್ದರು ಆದರೆ ಖಾತಾ ಬದಲಾವಣೆ ಆಗಿರಲಿಲ್ಲ.

**04.** **2004** ರಲ್ಲಿ ನನ್ನ ತಂದೆ ಮತ್ತು ಅವರ ಸೋದರರರು ಭಾಗ ಮಾಡಿಕೊಂಡಿದ್ದರೆ ಅದೇ ವರ್ಷದಲ್ಲಿ ಅನುಕ್ರಮ **3** ಮತ್ತು **4** ಆಸ್ತೀಗಳನ್ನು ಖರೀದಿಸುವಷ್ಟು ಆದಾಯ ಬಂದಿತ್ತಾ ಎಂದರೆ ಅಷ್ಟು ಆದಾಯ ಬಂದಿರುತ್ತದೆ. ಅನುಕ್ರಮ **3** ಮತ್ತು **4** ಆಸ್ತೀಗಳನ್ನು ಖರೀದಿಸುವಷ್ಟು ಆದಾಯ ಬಂದಿತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. **2004** ಮತ್ತು **2005** ರಲ್ಲಿ ಹತ್ತಿ ಮತ್ತು ಮೆಕ್ಕೆಜೋಳ ಬಿತ್ತನೆ ಮಾಡಿದ್ದು ಎಷ್ಟು ಆದಾಯ ಬಂದಿರುತ್ತದೆ ಮತ್ತು ಯಾರಿಗೆ ಮಾರಾಟ ಮಾಡಿರುತ್ತಾರೆ ಎಂದು ನನ್ನ ತಂದೆಗೆ ಗೊತ್ತಿರುತ್ತದೆ. ನನಗೆ ಆದಾಯ ಚೆನ್ನಾಗಿ ಬಂದಿರುತ್ತದೆ ಎಂದು ಮಾತ್ರ ಗೊತ್ತಿರುತ್ತದೆ.

**05. 2004** ರಲ್ಲಿ ನನ್ನ ವಯಸ್ಸು **14** ವರುಷ ಇರುತ್ತದೆ. ಸದರಿ ಇಸವಿಯಲ್ಲಿ ಎಷ್ಟು ಆದಾಯ ಬಂದಿರುತ್ತದೆ ಎಂದು ನಾನು ಅಲ್ಪವಯಿ ಇರುವುದರಿಂದ ನನಗೆ ತಿಳಿದಿರುವುದಿಲ್ಲ ಎಂದರೆ ನನಗೆ ತಿಳಿದಿರುತ್ತದೆ. ಆ ವಯಸ್ಸಿನಲ್ಲಿ ನನಗೆ ಯಾವುದೇ ವ್ಯವಹಾರ ಜ್ಞಾನ ಇರುವುದಿಲ್ಲ ಎಂದರೆ ಇರುತ್ತದೆ ಏಕೆಂದರೆ ನಾನು ತರಕಾರಿ ವ್ಯಾಪಾರಕ್ಕೆ ಹೋಗುತ್ತಿದ್ದೇ. **2004** ರಲ್ಲಿ ನನ್ನ ತಂದೆ ಅವರ ಸಹೋದರರು ಕೂಡು ಕುಟುಂಬದಲ್ಲಿ ಇರಲಿಲ್ಲ.

**06.** ನಾನು **2017** ರಲ್ಲಿ ನಾನು ನನ್ನ ಭಾಗ ಕೊಡಿ ಎಂದು ನನ್ನ ತಂದೆಯನ್ನು ಕೇಳಿರುತ್ತೇನೆ. ಯಾವ ತಾರೀಖು ಹಾಗೂ ತಿಂಗಳಿನಲ್ಲಿ ನಾನು ನನ್ನ ಭಾಗ ಕೊಡಿ ಎಂದು ಕೇಳಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಸಾಕ್ಷಿಯು ನಂತರದಲ್ಲಿ **06-09-2017** ರಲ್ಲಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಈ ತಾರಿಖಿನಿಂದ **2** ತಿಂಗಳ ಮುಂಚಿತವಾಗಿ ನಾನು ಮನೆ ಬಿಟ್ಟು ಹೋಗಿ ಮದುವೆ ಆಗಿರುತ್ತೇನೆ ಎಂದರೆ **15-08-2015** ರಂದು ನಾನು ಮದುವೆ ಆಗಿರುತ್ತೇನೆ. ನಾನು ಮದುವೆಯಾದ ಸಂದರ್ಭದಲ್ಲಿ ನನ್ನ ತಂದೆ ತಾಯಿ ಯಾರು ಇರಲಿಲ್ಲ ಎಂದರೆ ಸರಿ. ನಾನು ಮದುವೆ ಆದಾಗ ನನ್ನ ತಮ್ಮಂದಿರಾದ **3** ಮತ್ತು **4** ನೇ ಪ್ರತಿವಾದಿಯರು ಅಲ್ಪವಯಿ ಇದ್ದು ನನ್ನ ತಂದೆ ಅವರ ಪಾಲನೆ ಪೋಷಣೆ ಮಾಡುತ್ತಿದ್ದರು ಎಂದರೆ ಅವರು ವಯಸ್ಕರಾಗಿದ್ದರು. ನನ್ನ ಹಾಗೂ ತಮ್ಮಂದಿರ ವಿದ್ಯಾಬ್ಯಾಸಕ್ಕಾಗಿ **1** ಮತ್ತು **2** ನೇ ದಾವಾ ಆಸ್ತೀಯನ್ನು ಅಡಮಾನ ಮಾಡಿ ಸಾಲವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಲ ಪಡೆದಿರುವುದಿಲ್ಲ. ನಾನು ಮೌಖಿಕವಾಗಿ ನನ್ನ ತಂದೆಗೆ ಪಾಲು ವಿಭಾಗ ಕೇಳಿದ್ದು ಅವರು ಕೊಟ್ಟಿರುವುದಿಲ್ಲ ಎನ್ನುವ ಮಾತು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ಮಾಡಿದ ಸಾಲಕ್ಕೆ ನಾನು ಸಹ ಜವಾಬ್ದಾರಳು ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ವಯಸ್ಸಾಗಿದ್ದರಿಂದ ಮತ್ತು ಅವರಿಗೆ ಮದುಮೇಹದ ಕಾಯಿಲೆ ಮತ್ತು ಮೊಣಕಾಲು ನೋವು ಇರುವುದರಿಂದ ಅವರಿಗೆ ದುಡಿಯಲು ಆಗುವುದಿಲ್ಲ ಎಂದರೆ ಅವರಿಗೆ ಆದಾಯ ಬರುತ್ತದೆ. ನನ್ನ

ತಂದೆ ತಾಯಿಯನ್ನು ಜೋಪಾನ ಮಾಡಿಕೊಳ್ಳಬೇಕಾಗುತ್ತದೆ ಎಂದು ಸುಳ್ಳು ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಆಸ್ತೀಗಳಲ್ಲಿ ಪಾಲನ್ನು ತೆಗೆದುಕೊಂಡರೆ ನನ್ನ ತಂದೆ ತಾಯಿಗೆ ಜೀವನಾಂಶವನ್ನು ಕೊಡಬೇಕಾಗುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎರಡನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯವನ್ನು ಕೋರಿದ್ದರಿಂದ ಸಮಯಕಾವಶವನ್ನು ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"
**Sd/-**
(ಶ್ರೀಮತಿ ಅಕ್ಷತಾ ಟಿ)
ದಿವಾಣಿ ನ್ಯಾಯಾಧೀಶರು,
ಹಡಗಲಿ.